ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು –560 010

ಇ–ಮೇಲ್ : kssidcho@karnataka.gov.in ವೆಬ್‌ಸೈಟ್ : www.kssidc.co.in

ಸಂಖ್ಯೆ:ಸಮನ್ವಯ:ಮಳಗೆ:ನಿವೇಶನ:ಹಂಚಿಕೆ:ಪ್ರಕಟಣೆ:ಅವಧಿ ವಿಸ್ತರಣೆ:2024 ದಿನಾಂಕ:**12-06-2024**

## ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಲಭ್ಯವಿರುವ ಮಳಗೆ/ನಿವೇಶನಗಳ ಹಂಚಿಕೆಗಾಗಿ ಅರ್ಜಿ ಸಲ್ಲಿಸಲು ಕಾಲಾವಧಿ ವಿಸ್ತರಣೆ ಪ್ರಕಟಣೆ

ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಲಭ್ಯವಿರುವ ಕೈಗಾರಿಕಾ ಮಳಗೆ/ನಿವೇಶನಗಳನ್ನು ಯಥಾಸ್ಥಿತಿಯಲ್ಲಿ ಹಂಚಿಕೆ ಮಾಡಲು ಆಸಕ್ತ ಭಾವಿ ಉದ್ದಿಮೆದಾರರಿಂದ ಅರ್ಜಿಗಳನ್ನು ಆಹ್ವಾನಿಸಿ, ಈ ಹಿಂದೆ ಕೆಳಕಂಡ ವಿವರಗಳಂತೆ ವಿವಿಧ ದಿನಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಿ, ಅರ್ಜಿ ಸಲ್ಲಿಸಲು ದಿನಾಂಕ **06.04.2024** ರವರೆಗೆ ನಿಗಧಿಪಡಿಸಲಾಗಿತ್ತು.

1) ಸಂಖ್ಯೆ:ಸಮನ್ವಯ:ಮೈ.ವಿ:ಮಳಗೆ:ನಿವೇಶನ:ಹಂಚಿಕೆ:ಪ್ರಕಟಣೆ:2024/08 ದಿನಾಂಕ: 01-03-2024
2) ಸಂಖ್ಯೆ:ಸಮನ್ವಯ:ಶಿ.ವಿ:ಮಳಗೆ:ನಿವೇಶನ:ಹಂಚಿಕೆ:ಪ್ರಕಟಣೆ:2024/09 ದಿನಾಂಕ: 01-03-2024
3) ಸಂಖ್ಯೆ:ಸಮನ್ವಯ:ಬೆಂ.ವಿ:ಮಳಗೆ:ನಿವೇಶನ:ಹಂಚಿಕೆ:ಪ್ರಕಟಣೆ:2024/10 ದಿನಾಂಕ: 01-03-2024
4) ಸಂಖ್ಯೆ:ಸಮನ್ವಯ:ಬೆ.ವಿ:ಮಳಗೆ:ನಿವೇಶನ:ಹಂಚಿಕೆ:ಪ್ರಕಟಣೆ:2024/11 ದಿನಾಂಕ: 01-03-2024
5) ಸಂಖ್ಯೆ:ಸಮನ್ವಯ:ತು.ವಿ:ಮಳಗೆ:ನಿವೇಶನ:ಹಂಚಿಕೆ:ಪ್ರಕಟಣೆ:2024/12 ದಿನಾಂಕ:01-03-2024
6) ಸಂಖ್ಯೆ:ಸಮನ್ವಯ:ಹು.ವಿ:ಮಳಗೆ:ನಿವೇಶನ:ಹಂಚಿಕೆ:ಪ್ರಕಟಣೆ:2024/13 ದಿನಾಂಕ: 01-03-2024
7) ಸಂಖ್ಯೆ:ಸಮನ್ವಯ:ಕ.ವಿ:ಮಳಗೆ:ನಿವೇಶನ:ಹಂಚಿಕೆ:ಪ್ರಕಟಣೆ:2024/14 ದಿನಾಂಕ :01-03-2024
8) ಸಂಖ್ಯೆ:ಸಮನ್ವಯ:ಎಸ್‌ಸಿಪಿ–ಟಿಎಸ್‌ಪಿ:ಮಳಗೆ:ಹಂಚಿಕೆ:ಪ್ರಕಟಣೆ:2024/15 ದಿನಾಂಕ:01-03-2024.

ಈ ಮಧ್ಯೆ ಸಾರ್ವತ್ರಿಕ ಚುನಾವಣೆ ಘೋಷಣೆಯಾಗಿ, ಕಂದಾಯ ಇಲಾಖೆಯ ಅಧಿಕಾರಿಗಳು ಚುನಾವಣೆ ಕೆಲಸಕ್ಕೆ ನಿಯೋಜನೆಗೊಂಡಿರುವ ಕಾರಣ, ಮಳಗೆ/ನಿವೇಶನಗಳ ಹಂಚಿಕೆಗೆ ಅರ್ಜಿ ಸಲ್ಲಿಸಲು ಅಗತ್ಯವಿರುವ ದಾಖಲಾತಿಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲವೆಂದು ಅನೇಕ ಭಾವಿ ಉದ್ದಿಮೆದಾರರು ವಿವಿಧ ವೇದಿಕೆಗಳಲ್ಲಿ ಮನವಿ ಸಲ್ಲಿಸಿದ್ದು, ಆದರೆ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದ ಹಿನ್ನಲೆಯಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಅವಧಿಯನ್ನು ವಿಸ್ತರಿಸಲು ಸಾಧ್ಯವಾಗಿರುವುದಿಲ್ಲ. ಅಂತೆಯೇ ಈಗ ಅರ್ಜಿ ಸಲ್ಲಿಸುವ ಕಾಲಾವಕಾಶವನ್ನು ದಿನಾಂಕ **29-06-2024ರ ಸಂಜೆ 05 ಗಂಟೆಯವರೆಗೆ** ವಿಸ್ತರಿಸಲಾಗಿದೆ.

ಈ ಮೇಲಿನ ಹಂಚಿಕೆ ಪ್ರಕಟಣೆಗಳಲ್ಲಿ, ನಮೂದಿಸಲ್ಪಟ್ಟಿರುವ ಹಂಚಿಕೆ ನಿಯಮ, ನಿಬಂಧನೆ, ಮಳಗೆ/ನಿವೇಶನಗಳ ದರ, ಸಹಾಯಧನ ಇತ್ಯಾದಿಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ. ಹೆಚ್ಚಿನ ವಿವರಗಳಗಾಗಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ಹತ್ತಿರದ ಶಾಖಾ / ವಿಭಾಗೀಯ ಕಛೇರಿ ಅಥವಾ ಪ್ರಧಾನ ಕಛೇರಿಯನ್ನು ಸಂಪರ್ಕಿಸಬಹುದು ಹಾಗೂ ನಿಗಮದ ವೆಬ್‌ಸೈಟ್ www.kssidc.co.in ನಲ್ಲಿಯೂ ವೀಕ್ಷಿಸಬಹುದಾಗಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು